ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಸ್ಪೇಷಲ್ ಕೇಸ್ :475/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚಂದ್ರೇಗೌಡ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಗಿರಿಗೌಡ | **10.01.2024** |
| ವಯಸ್ಸು | : | 63 ವರ್ಷ | |
| ವೃತ್ತಿ | : | ನಿವೃತ್ತ ಎ ಎಸ್ ಐ | ಪಿ.ಡಬ್ಲೂಃ 1 |
| ವಾಸಸ್ಥಳ | : | ಆಲನಹಳ್ಳಿ, ಮೈಸೂರು | ಸಿ.ಡಬ್ಲೂಃ 1 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2018 ರಿಂದ 2021 ರವರೆಗೆ ನಾನು ಸಿಸಿಬಿ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದೇನೆ.

2. ದಿಃ 02.10.2020 ರಂದು ಉದಯಗಿರಿಯ ಡಾ. ರಾಜಕುಮಾರ್ ರಸ್ತೆಯಲ್ಲಿ ನಾನು ಗಸ್ತು ಮಾಡುತ್ತಿದ್ದಾಗ ,ಬಾತ್ಮೀದಾರರಿದಿಂದ ಉದಯಗಿರಿಯ ಬಿಡಿ ಕಾಲೋನಿಯ ಅಬು- ಅಖಿಲ್ ಮಸಿದಿಯ ಹಿಂದೆ ರಹೀಮ್ ಎನ್ನುವ ವ್ಯಕ್ತಿ ಅಂಗಡಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು ಆ ಪ್ರಕಾರ ನಾನು ಪೊಲೀಸ್ ಠಾಣೆಗೆ 11 ಗಂಟೆಗೆ ಹಾಜರಾಗಿ ಪೊಲೀಸ್ ಇನ್ಸಪೆಕ್ಟರ್ ರವರಿಗೆ ವರದಿ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ನಾನು ಕೊಟ್ಟದ್ದಾಗಿದ್ದು ಅದನ್ನು ನಿಪಿ.- 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.- 1 (ಎ) ಎಂದು ಗುರುತಿಸಲಾಯಿತು.

3. ನನ್ನ ವರದಿಯ ಆದಾರದ ಮೇಲಿಂದ ಚಾಸಾ- 18 ರವರು ಪ್ರಕರಣವನ್ನು ದಾಖಲು ಮಾಡಿಕೊಂಡರು. ಚಾಸಾ- 18 ರವರು ಠಾಣೆಗೆ ಇಬ್ಬರನ್ನು ಪಂಚರಾಗಿ

ಚಾಸಾ- 2 ಮತ್ತು 3 ರವರನ್ನು ಬರಮಾಡಿಕೊಂಡರು. ಅವರಿಗೆ ಚಾಸಾ- 18 ನೋಟೀಸ್ ಕೊಟ್ಟರು. ಚಾಸಾ- 12, 13,14 ಹಾಗೂ ನನ್ನನ್ನು ಕರೆದುಕೊಂಡು ಚಾಸಾ- 18 ರವರು ಪಂಚರೊಂದಿಗೆ ದಾಳಿಗೆ ಬೇಕಾಗುವ ಪರಿಕರಗಳೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ಮಧ್ಯಾಹ್ನ 12 ಗಂಟೆಗೆ ಸ್ಥಳಕ್ಕೆ ಹೋದೆವು.

4. ನಾವು ಸ್ಥಳಕ್ಕೆ ಹೋದಾಗ ಅಂಗಡಿಯಲ್ಲಿ ಒಬ್ಬ ವ್ಯಕ್ತಿ ಇದ್ದ. ನಾವು ಹತ್ತಿರ ಹೋಗುತ್ತಿದ್ದಂತೆ ಆ ವ್ಯಕ್ತಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ನಾವು ಸುತ್ತುವರೆದು ಅವನನ್ನು ವಶಕ್ಕೆ ಪಡೆದೆವು. ಪಂಚಾಯಿತಿದಾರ ಸಮಕ್ಷಮದಲ್ಲಿ ನಾವು ಪರಸ್ಪರ ಅಂಗಶೋಧನೆ ಮಾಡಿಕೊಂಡೆವು. ಚಾಸಾ- 18 ರವರ ಆದೇಶದಂತೆ ಅಂಗಡಿಯ ಒಳಗೆ ಹೋಗಿ ಪರೀಕ್ಷಿಸಲಾಗಿ ಅಂಗಡಿಯ ಸಜ್ಜಾದ ಮೇಲೆ ಒಂದು ಪಾರದರ್ಶಕ ಪ್ಲಾಸ್ಟಿಕ್ ಕವರ್ ಇತ್ತು. ಅದನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇದ್ದದ್ದು ಕಂಡು ಬಂತು. ಅದು ಹೂ , ಕಾಂಡ , ಬೀಜ, ಸೊಪ್ಪಿನಿಂದ ಕೂಡಿದ್ದಾಗಿತ್ತು. ಗಾಂಜಾ ಎಂದು ಖಚಿತಪಡಿಸಿಕೊಂಡ ನಂತರ ಪಂಚರ ಸಮಕ್ಷಮ ಚಾಸಾ- 18 ರವರು ತೂಕ ಮಾಡಲಾಗಿ 1 ಕೆಜಿ 983 ಗ್ರಾಂ ಇತ್ತು. ದೊರೆತ ಗಾಂಜಾವನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲೆ ಎ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ಪಂಚರು ಹಾಗೂ ಚಾಸಾ- 18 , ಆರೋಪಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು.

5. ಚಾಸಾ- 18 ರವರ ಆದೇಶದ ಮೆರೆಗೆ ನ್ಯಾಯಾಲಯ ಮುಂದಿರುವ 1 ನೇ ಆರೋಪಿ ತನ್ನ ಜೇಬಿನಿಂದ ರೂ. 2,200/- ಹೊರಗೆ ಇಟ್ಟ. ಅದನ್ನು ತನಿಖಾಧಿಕಾರಿ ಪ್ಲಾಸ್ಟಿಕ್ ಕವರ್ ಗೆ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ಪಂಚರು ಹಾಗೂ ಚಾಸಾ- 18 , ಆರೋಪಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು.

6. 1 ನೇ ಆರೋಪಿಗೆ ಗಾಂಜಾದ ಬಗ್ಗೆ ವಿಚಾರಿಸಲಾಗಿ 2 ಮತ್ತು 3 ನೇ

ಆರೋಪಿತರಿಂದ ಗಾಂಜಾ ತೆಗೆದುಕೊಂಡು ಮಾರುವುದಾಗಿ ತಿಳಿಸಿದ. 1 ನೇ ಆರೋಪಿ 2 ಮತ್ತು 3 ನೇ ಆರೋಪಿತರ ಮನೆಯನ್ನು ತೊರಿಸುವುದಾಗಿ ಹಾಗೂ ಅವರ ಮನೆಯಲ್ಲಿ ಗಾಂಜಾವನ್ನು ಸೇಖರಿಸಿರುವುದಾಗಿ ತಿಳಿಸಿದ. ಆ ಪ್ರಕಾರ 1 ನೇ ಆರೋಪಿ ತೋರಿಸಿದ ಮಾರ್ಗದಲ್ಲಿ ಅಧಿಕಾರಿಗಳು ಸರ್ಕಾರಿ ವಾಹನದಲ್ಲಿ , ನಾನು ಮತ್ತು ಚಾಸಾ- 12 ರಿಂದ 14 ರವರು ಸ್ಕೂಟರ್ ನಲ್ಲಿ ಹೋದೆವು. 1 ನೇ ಆರೋಪಿ ನಮ್ಮನ್ನು ರಾಜೀವನಗರದ , 2 ನೇ ಹಂತ ಮನೆ ನಂ. 2100 ಹತ್ತಿರ ಕರೆದುಕೊಂಡು ಹೋದ. ಒಳಗೆ ಹೋಗಿ 1 ನೇ ಆರೋಪಿ ಸೋಪಾದ ಮೇಲೆ ಕುಳಿತಂತಹ ಇಬ್ಬರು ವ್ಯಕ್ತಿಗಳನ್ನು 2 ಮತ್ತು 3 ನೇ ಆರೋಪಿತರು ಎಂದು ಹೇಳಿದ. ಅವರು ನ್ಯಾಯಾಲಯದ ಮುಂದಿರು 2 ಮತ್ತು 3 ನೇ ಆರೋಪಿತರಾಗಿದ್ದಾರೆ. ಚಾಸಾ- 18 ರವರು 2 ಮತ್ತು 3 ನೇ ಆರೋಪಿತರನ್ನು ವಶಕ್ಕೆ ಪಡೆದು ಮನೆಯನ್ನು ಪರಿಶೀಲಿಸುವಂತೆ ತಿಳಿಸಿದರು. ಆ ಮನೆಯಲ್ಲಿ 2 ಕೊಣೆಗಳು ಇದ್ದು ಒಂದು ಕೋಣೆಯ ಸಜ್ಜಾದ ಮೇಲೆ ಜುವಾರಿ ಚೀಲದಲ್ಲಿ ಕಟ್ಟಿರುವ ಒಂದು ಬಂಡಲ್ ಇದ್ದು , ಅದನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇತು. ಚಾಸಾ- 18 ರವರು ಅದನ್ನು ಪಂಚರ ಸಮಕ್ಷಮ ತೂಕ ಮಾಡಲಾಗಿ ಅದು 3 ಕೆಜಿ 105 ಗ್ರಾಂ ಇತ್ತು. ಅದೇ ಸಜ್ಜಾದ ಮೇಲೆ ದಿನಪತ್ರಿಕೆಯಲ್ಲಿ ಸುತ್ತಿದ ಇನ್ನೊಂದು ಬಂಡಲ್ ಇದ್ದು ಅದನ್ನು ನೋಡಲಾಗಿ ಅದರಲ್ಲಿಯೂ ಸಹ ಗಾಂಜಾ ಇದ್ದದ್ದು ಕಂಡು ಬಂತು. ಚಾಸಾ- 18 ರವರು ಅದನ್ನು ಪಂಚರ ಸಮಕ್ಷಮ ತೂಕ ಮಾಡಲಾಗಿ ಅದು 5 ಕೆಜಿ 44 ಗ್ರಾಂ ಇತ್ತು. ಅವೆಲ್ಲವುಗಳನ್ನು ಬಿಳಿ ಬಟ್ಟೆಯಲ್ಲಿ ಹೊಲೆದು ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಚಾಸಾ- 18 ರವರು ವಶಕ್ಕೆ ಪಡೆದರು . ಜುವಾರಿ ಸಿಮೆಂಟ್ ಚೀಲ್ ವನ್ನು ಪ್ರತ್ಯೇಕ ಚೀಲದಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದುಕೊಳ್ಳಲಾಯಿತು.

7. ಮಧ್ಯಾಹ್ನ 2.15 ರಿಂದ 4.45 ಗಂಟೆಯವರೆಗೆ ಪಂಚನಾಮೆ ಮಾಡಿ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಜಪ್ತು ಮಾಡಿಕೊಳ್ಳಲಾಯಿತು. ಠಾಣೆಯಿಂದ ಹೊರಡುವಾಗಲೇ ಚಾಸಾ- 18 ರವರು ತೂಕದ ಯಂತ್ರವನ್ನು ತರಸಿಕೊಂಡಿದ್ದರು . ಈಗ ನಾನು ನೋಡುತ್ತಿರುವ ದಾಖಲೆ ಪಂಚನಾಮೆಯಾಗಿದ್ದು ನಿಪಿ.- 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.-2 (ಎ) ಎಂದು ಗುರುತಿಸಲಾಯಿತು.

8. (ಸಾಕ್ಷಿಗೆ ಜುವಾರಿ ಚೀಲವನ್ನು ತೋರಿಸುವ ಸಲುವಾಗಿ ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನ್ನು ತೆಗೆಯಲಾಯಿತು.) ಆ ದಿನ ವಶಕ್ಕೆ ಪಡೆದ ಜುವಾರಿ ಚೀಲವಾಗಿದ್ದು ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ಆ ದಿನ ಜಪ್ತು ಮಾಡಿಕೊಂಡಂತಹ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ 500 ರೂ ಮುಖಬೆಲೆಯ 3 ನೋಟುಗಳು , 200 ರೂ ಮುಖಬೆಲೆಯ 2, 100 ರೂ ಮುಖಬೆಲೆಯ 3 ನೋಟುಗಳನ್ನು 1 ನೇ ಆರೋಪಿ ಹಾಜರುಪಡಿಸಿದ್ದ.

9. ಚಾಸಾ- 18 ರವರು ನಮ್ಮೆಲ್ಲರೊಂದಿಗೆ ವಶಕ್ಕೆ ಪಡೆದ 3 ಜನ ಆರೋಪಿತರೊಂದಿಗೆ ಹಾಗೂ ಜಪ್ತಾದ ವಸ್ತುಗಳೊಂದಿಗೆ ಠಾಣೆಗೆ ಬಂದರು . ಆ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಹೆಚ್ ಸಿ ಆರ್ ರವರಿಂದಃ**

10. 1 ನೇ ಆರೋಪಿ 2 ಮತ್ತು 3 ಆರೋಪಿತರ ಬಗ್ಗೆ ಮಾಹಿತಿ ಕೊಟ್ಟ ನಂತರ ಮಫ್ತಿಯಲ್ಲಿ ಅವರ ವಿಳಾಸಕ್ಕೆ ಹೋಗಿ ಗಾಂಜಾ ನಮಗೆ ಮಾರಾಟ ಮಾಡುತ್ತೀರಾ ಎಂದು ವಿಚಾರಿಸಿರಲಿಲ್ಲ. ಆ ದಿನ ನಾವು ಒಟ್ಟು 8 ಜನ ಪೊಲೀಸ್ ಅಧಿಕಾರಿಗಳು ಹಾಗೂ ಪಂಚರು

ಆರೋಪಿತರ ಮನೆಗೆ ಹೋಗಿದ್ದೆವು. ನಾವು ಮನೆಗೆ ಹೋದಾಗ ನಮ್ಮನ್ನು ನೋಡಿ ಆರೋಪಿತರಿಗೆ ನಾವು ಪೊಲೀಸ್ ಅಧಿಕಾರಿಗಳು ಎಂದು ಗೊತ್ತಾಯಿತು. 2 ಮತ್ತು 3 ನೇ ಆರೋಪಿತರ ನಮ್ಮಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ನಾವು ಆ ದಿನ ಹೋದಂತಹ ಮನೆ 30*40 ಅಡಿ ವಿಸ್ತೀರ್ಣದಲ್ಲಿರುವ 2 ಅಂತಸ್ಥಿನ ಮನೆಯಾಗಿತ್ತು, ಆರೋಪಿತರು ಆ ದಿನ ಮೊದಲನೇ ಮಹಡಿಯಲ್ಲಿ ಇದ್ದರು. ಮನೆಯ ಮುಖ್ಯ ದ್ವಾರ ದಕ್ಷಿಣ ದಿಕ್ಕಿಗೆ ಇದೆ. ಚೆಕ್ ಬಂದಿಯ ಪ್ರಕಾರ ದಕ್ಷಿಣ ದಿಕ್ಕಿಗೆ ರಸ್ತೆ ಇದೆ. ನಿಪಿ. 2 ರಲ್ಲಿ ದಕ್ಷಿಣ ದಿಕ್ಕಿಗೆ ಏನು ನಮೂದಿಸಲಾಗಿದೆ ಎಂದು ನನಗೆ ಈಗ ನೆನಪಿಲ್ಲ.

11. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆ ಮನೆಯಲ್ಲಿ ಯಾವುದೇ ಗಾಂಜಾ ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮನೆಯಲ್ಲಿ ಗಾಂಜಾ ಇರಲಿಲ್ಲ , ಹಾಗಾಗಿ ಆರೋಪಿತರು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ನಿಪಿ. 2 ನ್ನು ಠಾಣೆಯಲ್ಲಿ ಬೆರಳಚ್ಚು ಮಾಡಿಸಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ನಿಪಿ. 2 ನ್ನು ಬೆರಳಚ್ಚು ಮಾಡಲಾಗಿದೆ . ಕೇಸಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ರೀತಿಯ ಗಾಂಜಾ ಸೊಪ್ಪು 2 ಮತ್ತು 3 ನೇ ಆರೋಪಿತರ ಮನೆಯಲ್ಲಿ ದೊರಯದೆ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿಯ ಪರ ವಕೀಲರ ವಿನಂತಿಯ ಮೆರೆಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

10.01.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.